ಹಾಗೂ ಮುಂದುವರೆದ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಾಗುವುದು. ಸಾಕ್ಷರತಾ ಆಂದೋಲನಾ ಮುಗಿಸಿರುವ ಜಿಲ್ಲೆಗಳಲ್ಲಿ ಸಾಕ್ಷರೋತ್ತರ ಹಾಗೂ ಮುಂದುವರೆದ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅರಣ್ಯ ಅಭಿವೃದ್ಧಿ ನಿಗಮದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ

736 - ಶ್ರೀ ಎಸ್. ಅಂಗಾರ (ಸುಳ್ಯಾ) : ಮಾನ್ಯ ಅರಣ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಲ್ಲಿ ಎಷ್ಟು ಜನ ಕಾರ್ಮಿಕರನ್ನು ತಾತ್ಕಾಲಿಕ ಗುತ್ತಿಗೆದಾರರ ಆಧಾರದಲ್ಲಿ ನಿಯಮಿಸಿ ದುಡಿಯುತ್ತಿದ್ದಾರೆ: ಈ ಕಾರ್ಮಿಕರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು?*

ಆ) *ಕೈಗಾರಿಕಾ ವಿವಾದಗಳ ಅಧಿನಿಯಮ 1947ರ ಪ್ರಕಾರಣ 'ಯು ' ರ ಪ್ರಕಾರ ಉಲ್ಲಂಘಿಸಿ, ದುಡಿಸುತ್ತಿದ್ದ ಆ ನಿತಿಯ ಧೋರಣೆಯನ್ನು ಹೊಂದಿರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಯಮದ ನಿಯೋಜಕರ ವಿರುದ್ಧ ಸರಕಾರ ಯಾವ ಕ್ರಮ ಕೈಗೊಂಡಿದೆ?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಈ ನಿಗಮದಲ್ಲಿ ಯಾವುದೆ ಕಾರ್ಮಿಕರನ್ನು ತಾತ್ಕಾಲಿಕ ಗುತ್ತಿಗೆದಾರರ ಆಧಾರದ ಮೇಲೆ ನಿಯಮಿಸಿಕೊಂಡಿಲ್ಲ.

ಆ) ಪ್ರಶ್ನೆ 'ಅ'ಗೆ ನೀಡಿರುವ ಉತ್ತರದನ್ವಯ ಕರ್ನಾಟಕ ಅರಣ್ಯ ವಿವಾದಗಳ ಅಧಿನಿಯಮ 1947 ಪ್ರಕರಣ 'ಯು' ರ ಉಲ್ಲಂಘನೆಯನ್ನು ಮಾಡಿರುವುದಿಲ್ಲ.

ಸುಳ್ಯಾ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಕ್ಷ-ಕಿರಣ ಘಟಕ ಕುರಿತು

742 - ಶ್ರೀ ಎಸ್. ಅಂಗಾರ (ಸುಳ್ಯಾ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುಳ್ಯಾ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಕ್ಸ್-ರೇ ಯೂನಿಟ್ ಪ್ರಾರಂಭಿಸಲಾಗಿದೆಯೇ, ಹಾಗಿದ್ದಲ್ಲಿ ಯಾವ ಆಸ್ಪತ್ರೆಯಲ್ಲಿ,*

ಆ) *ಅದು ಕಾರ್ಯ ನಿರ್ವಹಿಸುತ್ತಿದೆಯೇ, ಹಾಗೂ ಅದಕ್ಕೆ ಎಕ್ಸ್-ರೇ ತಾಂತ್ರಿಕರು ಇದ್ದಾರೆಯೇ?*

ಇ) *ಸುಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಂಬುಲೆನ್ಸ್ (ಸಂಚಾರಿ ವಾಹನ) ಮಂಜೂರಾಗಿದೆಯೇ? ಮಂಜೂರಾಗಿದ್ದರೆ ಸೂಳ್ಯ ಕೇಂದ್ರಕ್ಕೆ ಒದಗಿಸಲಾಗಿದೆಯೇ? ಒದಗಿಸಲಾಗಿದ್ದರೆ ಯಾವ ವರ್ಷದಲ್ಲಿ.*

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸತಿವರು):

ಅ) ಸುಳ್ಯಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಕ್ಷ-ಕಿರಣ ಘಟಕವು ಮಂಜೂರಾಗಿದೆ.

ಆ) ಕ್ಷ-ಕಿರಣ ಯಂತ್ರವು ಪೂರೈಕೆಯಾಗದ ಕಾರಣದಿಂದಲೂ ಹಾಗೂ ಕ್ಷ-ಕಿರಣ ತಂತ್ರಜ್ಞರ ಹುದ್ದೆ ಖಾಲಿ ಇರುವುದರಿಂದ ಅದು ಕಾರ್ಯ ನಿರ್ವಹಿಸುತ್ತಿಲ್ಲ. ಕ್ಷ-ಕಿರಣ ಯಂತ್ರವನ್ನು ಸರಬರಾಜು ಮಾಡಲು ಹಾಗೂ ಖಾಲಿ ಇರುವ ಕ್ಷ-ಕಿರಣ ತಂತ್ರಜ್ಞರ ಹುದ್ದೆಯನ್ನು ಸರ್ಕಾರದ ಮೀಸಲಾತಿ ಆದೇಶ ಹೊರಡಿಸಿದ ನಂತರ ತುಂಬಲು ನಂತರ ಕ್ಷ-ಕಿರಣ ಘಟಕವನ್ನು ಪ್ರಾರಂಭ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.